ಖಾಸಗಿ ಪ್ರಸಾರಕ್ಕಾಗಿ ಮಾತ್ರ

**ರೋಟರಿ ಕ್ಲಬ್ ಸುರತ್ಕಲ್‌ನ ಪಾಕ್ಷಿಕ ಮುಖಪತ್ರಿಕೆ**

**ರೋಟರಿ ಜಿಲ್ಲೆ 3181**

ಸನದು ಸಂಖ್ಯೆ 27539

# ಇ ಸುಹೃತ್

**ನವೆಂಬರ್ 01, 2025 ಸಂಪುಟ:18, ಸಂಚಿಕೆ: 09**



## ನಮ್ಮೆಲ್ಲ ಓದುಗ ಬಂಧುಗಳಿಗೆ ಕನ್ನಡ ರಾಜ್ಯೋತ್ಸವದ ಶುಭಾಶಯಗಳು

### ತಲೆ ಬರಹ

ನಲ್ಮೆಯ ರೋಟರಿ ಬಾಂಧವರೇ,

ಎಲ್ಲರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು.

ಒಕ್ಟೋಬರ್ ತಿಂಗಳಲ್ಲಿ ನಾವೆಲ್ಲ ಸೇರಿ ಸಂಭ್ರಮಿಸಿದ ದೀಪಾವಳಿ, ಆ ಸಂದರ್ಭದಲ್ಲಿ ಏರ್ಪಡಿಸಿದ ಮನೋರಂಜನಾ ಕಾರ್ಯಕ್ರಮಗಳು ಮತ್ತು ಸವಿದ ವಿಶೇಷ ಭೋಜನ ನಿಮ್ಮೆಲ್ಲರಿಗೂ ಹಿಡಿಸಿತೆಂದುಕೊಳ್ಳುತ್ತೇನೆ.

ಅದೇರೀತಿಯಲ್ಲಿ 26-10-2025 ರಂದು ನಾವೆಲ್ಲ ಜೊತೆಯಾಗಿ ಕುಂದಾಪುರದ ಯುವ ಮೆರೀಡಿಯನ್ನಲ್ಲಿ ಕಳೆದ ಆನಂದ ದಾಯಕ ಕ್ಷಣಗಳು ನಮ್ಮೊಳಗಿನ ಬಾಂಧವ್ಯವನ್ನು ಬಿಗಿಗೊಳಿಸುವಲ್ಲಿಸಫಲವಾಯಿತು ಎಂದು ಅಂದುಕೊಳ್ಳುತ್ತೇನೆ. ಒಂದೇ ಬಸ್ಸಿನಲ್ಲಿ ಪ್ರಯಾಣಿಸುತ್ತಾ ಕಳೆದ ಸಮಯವನ್ನು ನೀವೆಲ್ಲಾ ಖಂಡಿತ ಆನಂದಿಸಿದ್ದೀರಿ ಎಂದು ಭಾವಿಸುತ್ತೇನೆ.

ಮುಂದಿನ ಹದಿನೈದು ದಿನಗಳಲ್ಲಿ ಈ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಇವುಗಳಲ್ಲೆಲ್ಲ ನೀವು ಸಕ್ರೀಯವಾಗಿ ಬಾಗವಹಿಸಬೇಕು ಎಂದು ನಮ್ರ ವಿನಂತಿ

ನವೆಂಬರ್ ಒಂದರಂದು ನಾವು ನಾಗರಿಕ ಸಲಹಾ ಸಮಿತಿ, ಸುರತ್ಕಲ್ ಇವರೊಂದಿಗೆ ಸೇರಿ ಅಭಿವೃದ್ಧಿಪಡಿಸಿದ ಪೋಲಿಸ್ ಚೌಕಿಯನ್ನು ನಮ್ಮ ಯಂ. ಯಲ್. ಎ. ಡಾ. ಭರತ್ ಶೆಟ್ಟಿಯವರು ಲೋಕಾರ್ಪಣೆಗೊಳಿಸಲಿದ್ದಾರೆ.

ನವೆಂಬರ್ 2ರಂದು ರೋಟರಿ ಕ್ಲಬ್ ಮುಲ್ಕಿ ಇವರ ಸಹಭಾಗಿತ್ವದಲ್ಲಿ ತೋಕೂರು ಸುಬ್ರಹ್ಮಣ್ಯ ದೇವಳದ ಬಳಿ ವೈದ್ಯಕೀಯ ತಪಾಸಣಾ ಶಿಬಿರವೊಂದು ನಡೆಯಲಿದೆ.

ಅದೇ ದಿನ ಮಂಗಳೂರಿನ ಮಂಗಳ ಮೈದಾನದಲ್ಲಿ ವಲಯ ಮಟ್ಟದ ಹೊರಾಂಗಣ ಕ್ರೀಡಾ ಸ್ಪರ್ಧೆ ನಡೆಯಲಿಕ್ಕಿದೆ.

ನವೆಂಬರ್ 5ರಂದು ಕುಳಾಯಿ ವೆಂಕಟರಮಣ ಶಾಲೆಗೆ ಶೀತಲೀಕರಿಸಿದ ಕುಡಿಯವ ನೀರಿನ ವ್ಯವಸ್ಥೆಯೊಂದನ್ನು ನೀಡಲಿದ್ದೇವೆ.

ಹಾಗೆಯೇ ನವೆಂಬರ್ 8 ಮತ್ತು 9ರಂದು ಪುತ್ತೂರಿನಲ್ಲಿ ನಡೆಯಲಿರುವ T.R.F. seminarನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಾಗವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.



**ರೊ. ರಾಮಚಂದ್ರ ಬಿ. ಕುಂದರ್**
**ಅಧ್ಯಕ್ಷರು**

### ಸಂಭ್ರಮಿಸೋಣ ಬನ್ನಿ

## *ಈ ಸಮಯದಲ್ಲಿ ಜನ್ಮ ದಿನವನ್ನು ಆಚರಿಸುತ್ತಿರುವ....*





**ರೊ. ಚಂದ್ರಕಾಂತ್ ಮರಾಠೆ, ನವೆಂಬರ್ 1ರಂದು,**

**ರೊ. ಸಂತೋಷ್ ಕುಮಾರ್ ಯಸ್. ಪಿ. ನವಂಬರ್ 14ರಂದು**

**ರೊ. ರವಿಲೋಚನ ಆಚಾರ್ಯರ ಪುತ್ರಿ ಕು. ಮೇಘನಾ, ನವೆಂಬರ್ 3ರಂದು ಹಾಗೂ**


**ರೊ. ಯಮ್. ಬಿ. ಶೆಟ್ಟಿಯವರ ಪುತ್ರ, ಶ್ರೀಯುತ ಪ್ರವೀಣ್ ಶೆಟ್ಟಿ, ನವೆಂಬರ್ 5ರಂದು, ಹಾಗೆಯೇ,**

**ರೊ. ಉಮೇಶ್ ರಾವ್ ಕೊಂಡೆಪ್ಪಾಡಿಯವರ ಪುತ್ರ ಅವಿನಾಶ್ ನವೆಂಬರ್6ರಂದು,**

**ರೊ. ಶ್ರೀಷ ಕೆ. ಭಟ್ ಇವರ ಪುತ್ರಿ ಅವಿಕಾ ಭಟ್ ನವೆಂಬರ್ 8ರಂದು ಹಾಗೆಯೇ,**

## *ವೈವಾಹಿಕ ದಿನದ ಸಂಭ್ರಮದಲ್ಲಿರುವ...*





**ರೊ. ಉಮೇಶ್ ಭಟ್ ಮತ್ತು ಡಾ. ಶಶಿಕಲ ದಂಪತಿಗಳು ನ. 9ರಂದು,**

**ರೊ. ಯಚ್. ಮೋಹನ್ ರಾವ್ ಮತ್ತು ಶೈಲಾ ಮೋಹನ್ ದಂಪತಿಗಳು ನ. 11ರಂದು**

**ಇ ಸುಹೃತ್** **ಇವರೆಲ್ಲರಿಗೂ ಈ ವಿಶೇಷ ದಿನಗಳಲ್ಲಿ ತನ್ನ ವಿಶೇಷ ಶುಭ ಹಾರೈಕೆಗಳನ್ನು ತಿಳಿಸುತ್ತಿದೆ.**

ನಾವು ಯೋಚಿಸುವ, ಹೇಳುವ ಅಥವಾ ಮಾಡುವ ವಿಷಯಗಳನ್ನೆಲ್ಲ ಈ ಚತುರ್ವಿಧ ಪರೀಕ್ಷೆಗೊಳಪಡಿಸಿಕೊಳ್ಳೋಣ.

1.ಇದು ಸತ್ಯವೇ? 2. ಸಂಬಂಧಪಟ್ಟ ಎಲ್ಲರಿಗೂ ಇದು ನ್ಯಾಯವೇ?

3. ಇದು ಸದ್ಭಾವನೆ ಮತ್ತು ಉತ್ತಮ ಸ್ನೇಹವನ್ನು ನಿರ್ಮಿಸುತ್ತದೆಯೇ?

4. ಇದು ಸಂಬಂಧಪಟ್ಟ ಎಲ್ಲರಿಗೂ ಪ್ರಯೋಜನಕಾರಿಯಾಗುತ್ತದೆಯೇ?

**ನಾವು ಪ್ರತೀ ಮಂಗಳವಾರ ಸಂಜೆ 7:30ಕ್ಕೆ ಸುರತ್ಕಲ್ಲಿನ "ವಿರಾಟ್" ಸಭಾ ಭವನದಲ್ಲಿ ಸೇರುತ್ತೇವೆ**

ಹಿನ್ನೋಟ......

## ಕಳೆದ ಹದಿನೈದು ದಿನಗಳಲ್ಲಿ....

**15-10-2025:** ನಮ್ಮ ಕ್ಲಬ್ಬಿನ ಕೆಲ ಸದಸ್ಯರು ಸುರತ್ಕಲ್ಲಿನ ಲಯನ್ಸ್ ವಿಶೇಷ ಮಕ್ಕಳ ಶಾಲೆಗೆ ಭೇಟಿಯಿತ್ತು, ಅಲ್ಲಿನ ವಿಶೇಷ ಚೇತನ ಮಕ್ಕಳು ತಯಾರಿಸಿದ ಹಣತೆಗಳನ್ನು ಖರೀದಿಸಿದರು. ಈ ಸಂದರ್ಭದಲ್ಲಿ ಕ್ಲಬ್ಬಿನ ಅದ್ಯಕ್ಷ, ರೊ. ರಾಮಚಂದ್ರ ಕುಂದರ್, ಕಾರ್ಯದರ್ಶಿ ರೊ. ರಾಮಮೋಹನ್ ಯೆಣ್ಮಕಜೆ, ನಿರ್ದೇಶಕ ರೊ. ಪ್ರೊ. ಕೃಷ್ಣಮೂರ್ತಿ, ರೊ. ಡಾ. ರಾಜ ಮೋಹನ್ ರಾವ್ ಉಪಸ್ಥಿತರಿದ್ದರು.





**18-10-2025**: ಈ ದಿನ ನಡೆದ ನಮ್ಮ ಮಾಸಿಕ ಔತಣ ಕೂಟದಲ್ಲಿ ಈರ್ವರು ಹೊಸ ಸದಸ್ಯರನ್ನು ಕ್ಲಬ್ಬಿಗೆ ಸೇರ್ಪಡೆಗೊಳಿಸಲಾಯಿತು. ಓರ್ವರು ನಮ್ಮ ಸದಸ್ಯ, ರೊ. ಆನಂದ ರಾಯರ ಪುತ್ರ, 2ನೇ ಪೀಳಿಗೆ ರೊಟೇರಿಯನ್ ರೊ. ಅರವಿಂದ. ಇನ್ನೋರ್ವರು ಉದ್ಯಮಿ ರೊ. ಗಣೇಶ್ ಪಿ. ಇವರೀರ್ವರನ್ನೂ ನಮ್ಮ ಕ್ಲಬ್ಬಿನ ಹಿರಿಯ ಸದಸ್ಯರಾದ ರೊ. ಪಿ. ಪುರುಷೋತ್ತಮ ರಾವ್ ಮತ್ತು ರೊ. ಪಿ. ಶ್ರೀನಿವಾಸ್ ರಾವ್ ಕ್ಲಬ್ಬಿಗೆ ವಿಧಿವತ್ತಾಗಿ ಸೇರ್ಪಡೆಗೊಳಿಸಿದರು.





ಇದೇ ಸಂದರ್ಭದಲ್ಲಿ ಸಾರ್ವಜನಿಕ ವಲಯದಲ್ಲಿ ವಿಶೇಷವಾಗಿ ಸನ್ಮಾನಗೊಂಡ ಈರ್ವರು ಸದಸ್ಯರು, ರೊ. ಅಗರಿ ರಾಘವೇಂದ್ರ ಮತ್ತು ರೊ. ಶ್ರೀಷ ಕೆ. ಭಟ್ ಇವರನ್ನು ಕ್ಲಬ್ಬಿನ ವತಿಯಿಂದ ಸನ್ಮಾನಿಲಾಯಿತು.

ಹಾಗೆಯೇ ಇತ್ತೀಚೆಗೆ ನಡೆದ ವಲಯ ಮಟ್ಟದ ಒಳಾಂಗಣ ಕ್ರೀಡಾ ಕೂಟದಲ್ಲಿ ಚಿನ್ನ ಮತ್ತು ಬೆಳ್ಳಿ ಪದಕ ವಿಜೇತರಾದ ಎಲ್ಲಾ ಆಟಗಾರರನ್ನೂ ಕ್ಲಬ್ ವತಿಯಿಂದ ಗುರುತಿಸಲಾಯಿತು. ಸ್ಮರಣಿಕೆಗಳನ್ನು ನೀಡುವ ಮೂಲಕ ಈ ಕಾರ್ಯವನ್ನು ಹಿರಿಯ ಸದಸ್ಯ ರೊ. ಯಮ್. ಬಿ. ಶೆಟ್ಟಿ ನಡೆಸಿಕೊಟ್ಟರು.



ಸಭಾಕಾರ್ಯಕ್ರಮದ ನಂತರ ವಿವಿಧ ಮನೋರಂಜನಾ ಕಾರ್ಯಕ್ರಮ ಹಾಗೂ ಸ್ವಾದಿಷ್ಟ ಭೋಜನದೊಂದಿಗೆ ದೀಪಾವಳಿಯನ್ನು ಆಚರಿಸಲಾಯಿತು.

**24-10-2025**: ಪಾರದೀಪ್ ಫೋಸ್ಪೇಟ್ಸ್ ಲಿಮಿಟೆಡ್ ಕಂಪೆನಿಯ ಸಿ. ಯಸ್. ಆರ್. ನಿಧಿಯನ್ನು ಉಪಯೋಗಿಸಿಕೊಂಡು ನಮ್ಮ ಕ್ಲಬ್ಬಿನ ಮೂಲಕ "ಐಕ್ಯಂ ವಿಶೇಷ ಮಕ್ಕಳ ಶಾಲೆಗೆ ಸುಝುಕಿ ಇಕೋ ವಾಹನ ಒಂದನ್ನು ಅಲ್ಲಿನ ಮಕ್ಕಳ ಉಪಯೋಗಕ್ಕಾಗಿ ನೀಡಲಾಯಿತು. ಪಿ. ಪಿ. ಯಲ್. ನ ಮುಖ್ಯ ಅಧಿಕಾರಿ ರೊ. ಗಿರೀಶ್ ಯಸ್. ಇವರು ವಾಹನದ ಕೀಲಿ ಕೈಯನ್ನು ಶಾಲಾ ಸಮಿತಿಯ ಅಧಿಕಾರಿಗಳಿಗೆ ಹಸ್ತಾಂತರಿಸಿದರು.





**26-10-2025:** ಕ್ಲಬ್ ವತಿಯಿಂದ ಕುಂದಾಪುರದ ಬಳಿ ಇರುವ "ಯುವ ಮಿರೀಡಿಯನ್ ಎಮ್ಯೂಸ್ಮೆಂಟ್ ಪಾರ್ಕ್" ಗೆ ಪಿಕ್ನಿಕ್ ಒಂದನ್ನು ಏರ್ಪಡಿಸಲಾಗಿತ್ತು. ನಮ್ಮ ರೋಟರಿ ಕುಟುಂಬದ 52 ಸದಸ್ಯರು ಭಾಗವಹಿಸಿದ್ದರು. ಯುವಕರು, ಕಿರಿಯರು ವಿವಿಧ ರೀತಿಯ ನೀರಾಟಗಳನ್ನಾಡಿದರೆ ಹಿರಿಯ ಸದಸ್ಯರು ಅವರನ್ನು ನೋಡುತ್ತಾ, ಹಿರಿಯರಿಗಾಗಿಯೇ ಏರ್ಪಡಿಸಲಾದ ಹಲವು ಆಟಗಳನ್ನಾಡಿ ಸಂಭ್ರಮಿಸಿದರು. ಇಡೀ ದಿನದ ಕಾರ್ಯಕ್ರಮವು ಕ್ಲಬ್ಬಿನ ಸದಸ್ಯರಲ್ಲಿ ಕೌಟುಂಬಿಕ ಭಾವನೆಯನ್ನು ಮೂಡಿಸುವಲ್ಲಿ ಅತ್ಯಂತ ಯಶಸ್ವಿಯಾಯಿತು.










ರೊ. ರಾಮ ಮೋಹನ್ ವೈ.

ಕಾರ್ಯದರ್ಶಿ

## ದಿ ರೋಟರಿ ಫೌಂಡೇಶನ್ - ಸಂಕ್ಷಿಪ್ತ ಪರಿಚಯ

ರೋಟರಿ ಫೌಂಡೇಶನ್ 1917ರಲ್ಲಿ ರೋಟರಿ ಇಂಟರ್‌ನ್ಯಾಶನಲ್ ಸಂಸ್ಥೆಯ ಮುಖ್ಯಸ್ಥ ಆರ್ಚ್ ಕ್ಲಂಪ್‌ನವರಿಂದ ಸ್ಥಾಪಿಸಲ್ಪಟ್ಟ ಜಾಗತಿಕ ಸಂಸ್ಥೆಯಾಗಿದೆ. ಇದು ರೋಟರಿ ಆಂದೋಲನದ ಮೂಲಕ ವಿಶ್ವದ ಮಟ್ಟದಲ್ಲಿ ವಿವಿಧ ಸಮಾಜಮುಖಿ ಕೆಲಸಗಳಿಗೆ, ಮಾನವೀಯ ಸಹಾಯ, ಶಿಕ್ಷಣ, ಸಾಮೂಹಿಕ ಆರೋಗ್ಯ ಹಾಗೂ ವಿಶ್ವ ಶಾಂತಿಯಂತಹ ಸಾಮಾಜಿಕ ಕಳಕಳಿಯಿರುವ ಕೆಲಸಗಳಿಗೆ ಧನ ಹಾಗು ಇನ್ನಿತರ ಸಹಾಯವನ್ನು ನೀಡುತ್ತದೆ.




**ಮೂಲ ಆಶಯಗಳು**: ರೋಟರಿ ಫೌಂಡೇಶನ್‌ನ ಪ್ರಮುಖ ಉದ್ದೇಶವು ಆರೋಗ್ಯ, ಶಿಕ್ಷಣ ಮತ್ತು ಬಡತನ ನಿರ್ಮೂಲನೆಗೆ ಸಹಾಯವಾಗುವ ಸೇವೆಗಳನ್ನು ಒದಗಿಸುವುದು. ಇದಲ್ಲದೆ, ಸಾಮಾಜಿಕ ಅಭಿವೃದ್ಧಿ ಹಾಗೂ ಶಾಂತಿ ಸ್ಥಾಪನೆಗೆ ಸಹಕಾರ ನೀಡುವುದೂ ಇದರ ಉದ್ದೇಶವಾಗಿದೆ.

**ಮುಖ್ಯ ಕಾರ್ಯಕ್ರಮಗಳು**:

1. **ಪೋಲಿಯೊ ನಿವಾರಣಾ ಕಾರ್ಯಕ್ರಮ**: ರೋಟರಿ ಫೌಂಡೇಶನ್‌ನ ಪ್ರಮುಖ ಯೋಜನೆಗಳಲ್ಲಿ ಒಂದಾಗಿದೆ 'ಎಂಡ್ ಪೋಲಿಯೊ' ಅಭಿಯಾನ. 1988ರಲ್ಲಿ ಆರಂಭವಾದ ಈ ಅಭಿಯಾನದಿಂದಾಗಿ ಜಗತ್ತಿನಲ್ಲಿ ಪೋಲಿಯೊ ಕಾಯಿಲೆಯ ತೀವ್ರತೆ ತುಂಬಾ ಕಡಿಮೆಯಾಗಿದ್ದು, ಜಾಗತಿಕ ಮಟ್ಟದಲ್ಲಿ ಇದನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಉದ್ದೇಶವಿದೆ.

2. **ಶಾಂತಿ ಸಹಕಾರ ಅಭಿವೃದ್ಧಿ**: ಫೌಂಡೇಶನ್ ಪ್ರಸ್ತುತ 'ರೋಟರಿ ಪೀಸ್ ಫೆಲ್ಲೋಶಿಪ್' ಎಂಬ ಒಂದು ವಿಶೇಷವಾದ ಫೆಲ್ಲೋಶಿಪ್ ಯೋಜನೆಯ ಮೂಲಕ ಶಾಂತಿ ಪ್ರಚಾರ ಹಾಗೂ ಸಂಘರ್ಷ ನಿರ್ವಹಣೆಯ ತರಬೇತಿ ನೀಡುತ್ತಿದೆ.

**ಶಿಕ್ಷಣಕ್ಕೆ ಆದ್ಯತೆ**: ಪೋಷಕರಿಲ್ಲದ ಮಕ್ಕಳಿಗೆ ಶಿಕ್ಷಣ, ಆರೋಗ್ಯ ಸೇವೆಗಳನ್ನು ಒದಗಿಸುವುದು, ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಗಳು, ವಿದ್ಯಾರ್ಥಿ ವೇತನ ಆಧಾರಿತ ವೇದಿಕೆಗಳನ್ನು ಅಭಿವೃದ್ಧಿಪಡಿಸುತ್ತಿದೆ.

**ಸ್ಥಳೀಯ ಕ್ಲಬ್‌ಗಳಿಗೆ ಸಹಕಾರ**: ರೋಟರಿ ಫೌಂಡೇಶನ್ ಸ್ಥಳೀಯ ರೋಟರಿ ಕ್ಲಬ್‌ಗಳಿಗೆ ಧನಸಹಾಯದ ಮೂಲಕ ಸಹಕಾರ ನೀಡುತ್ತದೆ, ಇದರಿಂದಾಗಿ ಅವು ತಮ್ಮದೇ ಆದ ಸಮಾಜಮುಖಿ ಯೋಜನೆಗಳನ್ನು ರಚಿಸಲು ಮತ್ತು ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತದೆ.

**ಸಂಪನ್ಮೂಲ ಸಂಗ್ರಹಣೆ ಮತ್ತು ಸಹಾಯ**: ಈ ಫೌಂಡೇಶನ್ ತನ್ನ ಸೇವಾ ಯೋಜನೆಗಳಿಗಾಗಿನ ಸಂಪತ್ತು ಸೃಜಿಸಲು ವೈಯಕ್ತಿಕ ದಾನ, ಕಾರ್ಪೊರೇಟ್ ಧನಸಹಾಯ, ಮತ್ತು ಸಾರ್ವಜನಿಕ ವಿತ್ತ ಸಂಗ್ರಹಣೆ ಮಾಡುವ ಮೂಲಕ ವಿವಿಧ ಹಂತದಲ್ಲಿ ಹಣಕಾಸು ಸಂಗ್ರಹಿಸುತ್ತದೆ.




**ಆಧುನಿಕ ಪರಿಣಾಮಗಳು**: ಬರೇ 2020-21ರಲ್ಲಿ ಮಾತ್ರವೇ ರೋಟರಿ ಫೌಂಡೇಶನ್ 1.2 ಬಿಲಿಯನ್ ಡಾಲರ್‌ಗಳ ದೇಣಿಗೆ ಒದಗಿಸಿದ್ದು, ಅನೇಕ ಸಕ್ರಿಯ ಯೋಜನೆಗಳನ್ನು ಜಾರಿಗೆ ತಂದಿದೆ.

ರೋಟರಿ ಫೌಂಡೇಶನ್, ಅದರ ಬೃಹತ್ ಸೇವಾ ಯೋಜನೆಗಳ ಮೂಲಕ, ವಿಶ್ವದ ಎಲ್ಲಾ ಭಾಗಗಳಲ್ಲಿ ಮಾನವೀಯತೆಯ ಬಲವರ್ಧನೆಗೆ ಶ್ರಮಿಸುತ್ತಿದೆ.

## ರಕ್ತದಾನ ಶಿಬಿರ



SUIET ರೋಟರಾಕ್ಟ್ ಕ್ಲಬ್ ಮತ್ತು ಶ್ರೀನಿವಾಸ ಆಸ್ಪತ್ರೆ ರಕ್ತ ಬ್ಯಾಂಕ್ ಸಹಯೋಗದಲ್ಲಿ 23 ಸೆಪ್ಟೆಂಬರ್ 2025 ರಂದು SUIET ಕ್ಯಾಂಪಸ್ ನಲ್ಲಿರಕ್ತದಾನ ಶಿಬಿರವನ್ನುಆಯೋಜಿಸಲಾಯಿತು. ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಲು ಪ್ರೋತ್ಸಾಹಿಸುವುದು ಮತ್ತುಅದರ ಮಹತ್ವವನ್ನುತಿಳಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು.

ಶಿಬಿರವು ಬೆಳಿಗ್ಗೆ 10:00 ಗಂಟೆಗೆ ಪ್ರಾರಂಭವಾಗಿ ಮಧ್ಯಾಹ್ನ 2:30 ಗಂಟೆಗೆ ಮುಕ್ತಾಯಗೊಂಡಿತು.

ಎಲ್ಲಾವಿಭಾಗಗಳ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯು ಉತ್ಸಾಹದಿಂದ ಭಾಗವಹಿಸಿದರು. ಒಟ್ಟು 61 ಯೂನಿಟ್ ಗಳ ರಕ್ತ ಸಂಗ್ರಹಿಸಲಾಯಿತು. ರಕ್ತದಾನಕ್ಕೂ ಮುನ್ನ ಪ್ರತಿಯೊಬ್ಬ ದಾನಿಗೂ ಹೀಮೋಗ್ಲೋಬಿನ್ ಮಟ್ಟ, ರಕ್ತದ ಒತ್ತಡ ಮತ್ತು ತೂಕ ಪರೀಕ್ಷೆ ಸೇರಿದಂತೆ ಮೂಲ ಆರೋಗ್ಯ ಪರೀಕ್ಷೆಗಳು ನಡೆಸಲಾಯಿತು.

ಈ ಕಾರ್ಯಕ್ರಮವು ಕೇಂದ್ರ ಸರ್ಕಾರದ "ಸ್ವಸ್ಥ ನಾರಿ ಶಕ್ತ ಪರಿವಾರ" ಉಪಕ್ರಮದ ಭಾಗವಾಗಿದ್ದು, ಐದು ಮಹಿಳಾ ದಾನಿಗಳನ್ನುವಿಶೇಷವಾಗಿ ಗೌರವಿಸಲಾಯಿತು. ರಕ್ತ ಬ್ಯಾಂಕ್ ಅಧಧಿಕಾರಿ, ಆಸ್ಪತ್ರೆಯ ಸಿಬ್ಬಂದಿ ಹಾಗೂ ರೋಟರಾಕ್ಟ್ ಕ್ಲಬ್ ಸದಸ್ಯರ ಸಕ್ರಿಯ ಉಪಸ್ಥಿತಿಯಿಂದ ಈ ಕಾರ್ಯಕ್ರಮ ಹೆಚ್ಚು ಅರ್ಥಪೂರ್ಣವಾಯಿತು.



ರೋಟರಾಕ್ಟರ್ ರಾಲ್ಫ ಜೋಯೆಲ್

ಕಾರ್ಯದರ್ಶಿ, ರೋಟರಾಕ್ಟ್ ಕ್ಲಬ್ ಓಫ್ ಯಸ್. ಯು, ಐ, ಈ. ಟಿ.

ಎಲ್ಲಾದಾನಿಗಳಿಗೆ ಧನ್ಯವಾದವಾಗಿ ಪ್ರಶಂಸಾ ಪ್ರಮಾಣಪತ್ರಗಳು ವಿತರಿಸಲಾಯಿತು. ಈ ಶಿಬಿರವು ಯಶಸ್ವಿಯಾಗಿ ಮುಗಿದು, SUIET ಸಮುದಾಯದ ಏಕತೆ, ಕರುಣೆ ಮತ್ತುಸಾಮಾಜಿಕ ಹೊಣೆಗಾರಿಕೆಯನ್ನುಪ್ರತಿಬಿಂಬಿಸಿತು.

## ಸ್ನೇಹ ಸದನಕ್ಕೊಂದು ಭೇಟಿ

ದಿನಾಂಕ: 18 ಅಕ್ಟೋಬರ್ 2025

ಸ್ಥಳ: ಸ್ನೇಹಸದನ — ಸೈಂಟ್ ಕ್ಯಾಮಿಲಸ್ ಕೇರ್ ಹೋಮ್, ಮಂಗಳೂರು

ಭಾಗವಹಿಸಿದವರು: ರೋಟರಾಕ್ಟ ಕ್ಲಬ್ ಯನ್. ಐ. ಟಿ, ಕೆ ಯ 39 ಸದಸ್ಯರು (2ನೇ, 3ನೇ ಹಾಗೂ 4ನೇ ವರ್ಷದ B.Tech)

18 ಅಕ್ಟೋಬರ್ 2025 ರಂದು ರೋಟರಾಕ್ಟ ಕ್ಲಬ್ ಯನ್. ಐ. ಟಿ, ಕೆ ತಂಡವು ಸ್ನೇಹಸದನ — ಸೇಂಟ್ ಕ್ಯಾಮಿಲಸ್ ಕೇರ್ ಹೋಮಿಗೆ ಭೇಟಿ ಇತ್ತು ಅಲ್ಲಿಯ ಮಕ್ಕಳೊಂದಿಗೆ ಒಂದು ದಿನವನ್ನು ಕಳೆದು ನಲಿಕೆ ಕಲಿಕೆ ಗಳ ಸಮ್ಮಿಶ್ರ ಅನುಭವವನ್ನು ಪಡೆದೆವು. ಒಟ್ಟು 39 ಸದಸ್ಯರ ನಮ್ಮ ತಂಡವು ಅಲ್ಲಿಗೆ ಹೋಗುವುದಕ್ಕೂ ಮೊದಲೇ ಪೂರ್ವಭಾವಿಯಾಗಿ ಕೆಲವೊದು ತಯಾರಿಯನ್ನು ನಡೆಸಿಕೊಂಡಿದ್ದೆವು. ಮಕ್ಕಳಿಗಾಗಿ ಆಯೋಜಿಸಿಕೊಂಡಿದ್ದ ಆಟಗಳಲಿ ಮಕ್ಕಳ ಪ್ರಾಯಕ್ಕನುಗುಣವಾಗಿ ಐದು ಪ್ರಮುಖ ಆಟಗಳು ಇದ್ದವು: ಅವುಗಳೆನದರೆ:



1. Team Relay Challenge (cup pyramid, paired balloon carry, frog jumps),,
2. 2. Duck Duck Goose (ball version),
3. Word Dumb Charades’ 4. Pass the Ball, 5. Red Light, Green Light

ಪ್ರತೀಯೊಂದು ಆಟವೂ ಸುಮಾರು 10ರಿಂದ 12 ನಿಮಿಷಗಳಷ್ಟು ಕಾಲಾವಧಿಯದ್ದಾಗಿದ್ದು ಮಕ್ಕಳಲ್ಲಿತಂಡವಾಗಿ ಕೆಲಸಮಾಡುವ (Team work), ತಂಡದಲ್ಲಿ ಸಮನ್ವಯ ಸಾಧನೆ (Co-ordination) ಮತ್ತು ಆತ್ಮವಿಶ್ವಾಸದ ಹೆಚ್ಚಳ, ಇವುಗಳನ್ನು ಗುರಿಯನ್ನಾಗಿಸಿಕೊಂಡಿದ್ದವು. ನಮ್ಮ ತಂಡದ ಕೆಲವರು ಜವಬ್ದಾರಿಯನ್ನು ವಹಿಸಿಕೊಂಡು ಮಕ್ಕಳಿಗೆ ಮಾರ್ಗ ದರ್ಶನವನ್ನು ನೀಡಿ,ಅವರು ಸುರಕ್ಷಿತವಾಗಿ ಭಾಗವಹಿಸುವಂತೆ ಮುಂಜಾಗ್ರತೆ ವಹಿಸಿದರು.

ಪಾಸ್ ದಿ ಬಾಲ್ನಲ್ಲಿ ಮಕ್ಕಳು ಹಾಡು ಹಾಡುವುದು, ನೃತ್ಯ ಮಾಡುವುದು,tongue twisterಗಳನ್ನು ಉಚ್ಚರಿಸುವುದು ಇತ್ಯಾದಿ ಹಾಸ್ಯಮಯ ಚಟುವಟಿಕೆಗಳನ್ನು ಪ್ರದರ್ಶಿಸಿದರು. ಚಾರೇಡ್ಸ್ ಮೂಲಕ ಮಕ್ಕಳ ಸೃಜನಶೀಲತೆ ಮತ್ತು ಸಂವಹನ ಕೌಶಲ್ಯಗಳು ಹೆಚ್ಚಿದವು. ರಿಲೆ ಚ್ಯಾಲೆಂಜ್ ಮೂಲಕ ಸಹಕಾರದ ಮನೋಭಾವನೆ ಬೆಳೆಯಿತು.

ಈ ಸಮಯದದಲ್ಲಿ ಆ ಮಕ್ಕಳು ತೋರಿದ ಉತ್ಸಾಹ, ಮತ್ತು ಅವರ ಮುಖದಲ್ಲರಳಿದ ನಗೆ ಬುಗ್ಗೆನಮಗೆ ಸಿಕ್ಕಿದ ಅತ್ಯಮೂಲ್ಯ ಪ್ರತಿಫಲವಾಗಿತ್ತು. ಈ ಭೇಟಿಯು ನಮ್ಮ ಕ್ಲಬ್ ಮತ್ತು ಸ್ನೇಹಸದನದ ಮಧ್ಯೆ ಇದ್ದ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸಿದ್ದಲ್ಲದೆ ಆ ಮಕ್ಕಳ ಹವ್ಯಾಸಗಳು ಮತ್ತು ಅವರ ಅವಶ್ಯಕತೆಗಳ ಬಗ್ಗೆ ನಮ್ಮಲ್ಲಿ ಹೆಚ್ಚಿನ ಅರಿವನ್ನು ಮೂಡಿಸಿತು.

ಈ ಭೇಟಿಯ ಸಮಯದಲ್ಲಿ ನಾವು ಮಕ್ಕಳ ಶಿಕ್ಷಣಕ್ಕಾಗಿ ಪುಸ್ತಕಗಳು, ವಿವಿಧ ಪೆನ್ಸಿಲ್ ಇತ್ಯಾದಿ ಕಲಿಕಾ ಸಾಮಾಗ್ರಿಗಳನ್ನು ದಾನ ಮಾಡಿದ್ದೇವೆ.



ಸಂಘಟನೆಯ ಸಿಬ್ಬಂದಿಯ ಆತಿಥ್ಯ ಮತ್ತು ಸಹಕಾರಕ್ಕಾಗಿ ನಾವು ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

**ಶಿಫಾರಸು: ನಿಯಮಿತ ಭೇಟಿಗಳು, ಕಲೆ ಮತ್ತು ವಾಚನ ಕಾರ್ಯಕ್ರಮಗಳು ಮತ್ತು ಹೆಚ್ಚಿನ ಶಿಕ್ಷಣ ಸಾಮಗ್ರಿಗಳ ಮೂಲಕ ನಿರಂತರ ಬೆಂಬಲ ನೀಡುವುದನ್ನು ಉತ್ತೇಜಿಸುತ್ತೇವೆ.**



ವರದಿ : ರೋಟರಾಕ್ಟರ್ ಪ್ರೊಮಿತ್ ರೋಯ್

ಕಾರ್ಯದರ್ಶಿ, ರೊಟರಾಕ್ಟ್ ಕ್ಲಬ್, ಯನ್. ಐ. ಟಿ. ಕೆ.

ಅನುವಾದಕರು:

ರೋಟರಾಕ್ಟರ್ ಗುರುಪ್ರಸಾದ ಭಟ್.

ಸ್ನೇಹಿತರೇ,

ಕಳೆದ ಸಲದ ರಸಪ್ರಶ್ನೆಗಳ ಸರಿಯಾದ ಉತ್ತರಗಳು ಈ ರೀತಿ ಇವೆ,

ರೋಟರಿ ರಸಪ್ರಶ್ನೆ 27: ಸಿ. ಸಾಂಪ್ರದಾಯಿಕ ಮತ್ತು ಆಧುನಿಕ ವೇದಿಕೆಗಳೆರಡಕ್ಕೂ ಸಮಾನ ಪ್ರಾಮುಖ್ಯತೆ ದೊರಕುವಂತೆ ಮಿಶ್ರ ತಂತ್ರಗಾರಿಕೆಯನ್ನು ಉಪಯೋಗಿಸುವುದು.

ಮಿದಿಳಿಗೊಂದು ಕಸರತ್ತು 27: ಅವನು ಎಷ್ಟು ಕುಳ್ಳನಾಗಿದ್ದನೆಂದರೆ ಕೊಡೆಯ ಸಹಾಯವಿಲ್ಲದಿದ್ದರೆ ಅವನಿಗೆ ಲಿಫ್ಟಿನ 8ನೇ ಮಹಡಿಯ ಗುಂಡಿಯನ್ನು ಒತ್ತಲು ಸಾಧ್ಯವಾಗುತ್ತಿರಲಿಲ್ಲ.

ಸುಡೋಕು 27

| | | | | | | | | |
|---|---|---|---|---|---|---|---|---|
| 7 | 4 | 1 | 2 | 3 | 5 | 9 | 6 | 8 |
| 3 | 2 | 8 | 9 | 6 | 1 | 4 | 5 | 7 |
| 6 | 9 | 5 | 8 | 4 | 7 | 2 | 3 | 1 |
| 9 | 1 | 6 | 3 | 8 | 2 | 5 | 7 | 4 |
| 8 | 3 | 7 | 5 | 1 | 4 | 6 | 9 | 2 |
| 2 | 5 | 4 | 6 | 7 | 9 | 8 | 1 | 3 |
| 4 | 6 | 3 | 1 | 5 | 8 | 7 | 2 | 9 |
| 1 | 8 | 9 | 7 | 2 | 6 | 3 | 4 | 5 |
| 5 | 7 | 2 | 4 | 9 | 3 | 1 | 8 | 6 |

ರೋಟರಿ ರಸಪ್ರಶ್ನೆ 28:

ಅಲ್ಪ ಸಂಖ್ಯಾತ ಸಮುದಾಯ ಒಂದರ ಎಲ್ಲ ಅರ್ಹತೆಗಳನ್ನೂ ಹೊಂದಿರುವ ಮಹಿಳೆಯೊರ್ವಳು ಸದಸ್ಯತನ ಬಯಸಿ ಬಂದಿರುತ್ತಾಳೆ. ಆದರೆ ಕೆಲ ಹಾಲಿ ಸದಸ್ಯರು ಆಕೆ ಕ್ಲಬ್ಬಿನ ಸಂಸ್ಕೃತಿಯೊಂದಿಗೆ ಹೊಂದಿಕೊಳ್ಳುವ ಬಗ್ಗೆ ಅನುಮಾನವನ್ನು ವ್ಯಕ್ತ ಪಡಿಸುತ್ತಾರೆ. ಈ ಸಂದರ್ಭದಲ್ಲಿ ನೀವು

ಅ. ನೀವು ಆಕೆಯ ಸದಸ್ಯತನವನ್ನು ಸದ್ದಿಲ್ಲದೆ ತಿರಸ್ಕರಿಸುತ್ತೀರಿ.

ಆ. ಆಕೆ ಕ್ಲಬ್ಬಿನ ಸಂಸ್ಕೃತಿಯೊಂದಿಗೆ ಹೊಂದಿಕಪಳ್ಳಲು ಒಪ್ಪಿದರೆ ಮಾತ್ರ ಆಕೆಗೆ ಸದಸ್ಯತನವನ್ನು ನೀಡುತ್ತೀರಿ.

ಇ. ರೋಟರಿಯ ವೈವಿಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ಆಕೆಯನ್ನು ಸದಸ್ಯಳಾಗಲು ಆಹ್ವಾನಿಸುತ್ತೀರಿ.

ಈ. ಆ ಬಗ್ಗೆ ನಿರ್ಣಯವನ್ನು ಅನಿರ್ದಿಶ್ಟವಾಗಿ ಮುಂದೂಡುತ್ತೀರಿ.

## ಕನ್ನಡ ಜನಪ್ರಿಯ ಒಗಟುಗಳು

೧. ಹಸಿರು ಗಿಡದ ಮೇಲೆ ಮೊಸರು ಚೆಲ್ಲಿದೆ-*ಮಲ್ಲಿಗೆ*
೨. ಅಂಗೈ ಅಗಲದ ರೊಟ್ಟಿಗೆ ಲೆಕ್ಕವಿಲ್ಲದಷ್ಟು ಉಪ್ಪಿನಕಾಯಿ-*ಆಕಾಶ, ನಕ್ಷತ್ರ*
೩. ಸುಟ್ಟ ಹೆಣ ಮತ್ತೆ ಸುಡ್ತಾರೆ-*ಇದ್ದಿಲು*
೪. ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿ ಲಿಂಗ-*ಹಲಸಿನ ಹಣ್ಣು, ಬೀಜ*
೫. ಅಂಗೈ ಕೊಟ್ಟರೆ ಮುಂಗೈನೂ ನುಂಗುತ್ತದೆ- *ಬಳೆ*
೬. ಒಂದು ಹಪ್ಪಳ ಊರಿಗೆಲ್ಲ ಊಟ- *ಚಂದ್ರ*
೭. ಆಕಾಶದಲ್ಲಿ ಕೊಡಲಿಗಳು ತೇಲಾಡುತ್ತವೆ- ಹುಣಸೇಹಣ್ಣು
೮. ನೀಲಿ ಕೆರೆಯಲಿ ಬಿಳಿ ಮೀನು-ನಕ್ಷತ್ರ
೯. ಒಂದು ತೇಲುತ್ತೆ ,ಒಂದು ಮುಳುಗುತ್ತೆ, ಒಂದು ಕರಗುತ್ತೆ.-ವಾರ,ತಿಂಗಳು,ವರ್ಷ
೧೧. ಬಾ ಅಂದರೆ ಬರೋಲ್ಲ , ಹೋಗು ಅಂದರೆ ಹೋಗೋಲ್ಲ-ಮಳೆ
೧೧. ನಾ ಇರುವಾಗ ಬರುತ್ತೆ , ನಾ ಹೋದ ಮೇಲೂ ಇರುತ್ತೆ-ಕೀರ್ತಿ
೧೨. ಬೆಳ್ಳಿ ಸಮುದ್ರದಲ್ಲಿ ಕಪ್ಪು ಸೂರ್ಯ-ಕಣ್ಣು
೧೩ ಅಕ್ಕನ ಮೇಲೆ ಛತ್ರಿ- ರೆಪ್ಪೆ
೧೪. ತಮ್ಮಂಗೆ ಮೂರು ಕಣ್ಣು ಅಮ್ಮಂಗೆ ಒಂದೇ ಕಣ್ಣು-*ತೆಂಗಿನ ಕಾಯಿ*
೧೫. ಅಕ್ಕ ಓದುತ್ತಾಳೆ ತಂಗಿ ನಡೀತ್ತಾಳೆ-*ಕಣ್ಣು*
೧೬.ಅಮ್ಮನ ಆಕಾಶವಾಣಿ ನಾನು-*ಮಗು*
೧೭. ಅಂಗಡಿಯಿಂದ ತರೋದು ಮುಂದಿಟ್ಟುಕೊಂಡು ಅಳೋದು-*ಈರುಳ್ಳಿ*
೧೮. ಅಂಗಣ್ಣ ಮಂಗಣ್ಣ ಅಂಗಿ ಬಿಚ್ಚಿಕೊಂಡು ನುಂಗಣ್ಣ- *ಬಾಳೆಹಣ್ಣು*
೧೯. ಗೂಡ್ನಲ್ಲಿರೋ ಜೋಡಿ ಪಕ್ಷಿ ಊರೆಲ್ಲ ನೋಡುತ್ತೆ-*ಕಣ್ಣು*
೨೦. ಒಂದು ಮಡಕೆ, ಮಡಕೆಯೊಳಗೆ, ಕುಡಿಕೆ, ಕುಡಿಕೆಯಲ್ಲಿ ಸಾಗರ-*ತೆಂಗಿನ ಕಾಯಿ*
೨೧. ನೀನಿಲ್ಲದೆ ಊಟವಿಲ್ಲ- *ಉಪ್ಪು*
೨೨. ಬಿಳಿ ಸರದಾರನಿಗೆ ಕರಿ ಟೋಪಿ-*ಬೆಂಕಿಕಡ್ಡಿ*
೨೩. ಕಾಲಿಲ್ಲ ಹುಡುಗಿಗೆ ಮಾರುದ್ದ ಕಡಿವಾಣ - *ಸೂಜಿ*
೨೪. ಮೂರು ಕಾಸಿನ ಕುದುರೆಗೆ ಮುನ್ನೂರು ರೂಪಾಯಿನ ಹಗ್ಗ-*ಹೇನು ಕೂದಲು*
೨೫. ಕೆಂಪು ಕುದುರೆಗೆ ಲಗಾಮು, ಓಬ್ಬ ಹತ್ತುತ್ತಾನೆ , ಇನ್ನೊಬ್ಬ ಇಳಿತಾನೇ-*ಬೆಂಕಿ ಬಾಣಲೆ, ದೋಸೆ*
೨೬ . ಒಂದು ಮನೆಗೆ ಒಂದೇ ತೊಲೆ-*ತಲೆ*
೨೭. ಕಂದ ಬಂದ ಕೊಂದ ತಂದ-*ಶ್ರೀ ರಾಮ ಚಂದ್ರ*
೨೮. ಕಲ್ಲಿಲ್ಲದ ಬೆಟ್ಟ ಮರಳಿಲ್ಲದ ಮರುಭೂಮಿ-*ಭೂಪಟ*
೨೯. ಚಿಕ್ಕಕ್ಕನಿಗೆ ಪುಕ್ಕುಧ್ದ-*ಸೌಟು*
೩೦. ಎರಡು ಮನೆಗೆ ಒಂದೇ ದೂಲ-*ಮೂಗು*

**ಸುಡೋಕು 28**

| | | | | | | | | |
|---|---|---|---|---|---|---|---|---|
| | | | | | | | 6 | |
| | | 6 | | 2 | 5 | | | |
| | | | | | 7 | 8 | | 4 |
| 9 | | | | 5 | | | 1 | |
| | 1 | 3 | | | | 7 | 8 | |
| | | | | | 6 | | 4 | |
| | 2 | 7 | | | | | 3 | |
| 6 | 9 | | 1 | | | | | |
| 8 | | | | | 2 | | | |

ಮಿದುಳಿಗೊಂದು ಕಸರತ್ತು

# ತಲೆಯ ಮೇಲೆ ಕಾಲಿಟ್ಟು ನಡೆಯುವ ಪ್ರಾಣಿ ಯಾವುದು?

ರಂಜನೆಯ ಸಮಯ ...

# ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು

.......................................

ಕರ್ನಾಟಕ ಜನಪದ ಎಂಬುದು ಕರ್ನಾಟಕ ದ ಜನತೆ ನೆಲೆಸಿರುವ ನಾಡು.'ಕರ್ನಾಟಕ' ಎಂಬುದು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನು ಒಳಗೊಂಡ ವ್ಯಾಪಕವಾದ ಅರ್ಥ ವನ್ನು  ಪಡೆದಿರುವ ಪದ.

ಮಹಾಭಾರತ ಕಾವ್ಯದಲ್ಲಿಯೇ ಕರ್ನಾಟಕ ಪದದ ಉಲ್ಲೇಖವಿದೆ ಎಂಬ ಅಭಿಪ್ರಾಯ ವಿದೆ.ಪ್ರಾಚೀನ ಸಂಸ್ಕೃತ ಶಾಸನಗಳ ಲ್ಲೂ 'ಕರ್ನಾಟಕ' ರೂಪದ ಮತ್ತು ಕರ್ನಾಟಕ ಸೈನಿಕರ ಸಾಹಸ ದ ವಿಚಾರ ಗಳು ಪ್ರಸ್ತಾಪ ವಾಗಿದೆ.

9ನೇ ಶತಮಾನದ ಕನ್ನಡದ ಕಾವ್ಯಲಕ್ಷಣ ಕೃತಿ ಕವಿ ರಾಜ ಮಾರ್ಗ ದಲ್ಲಿ ಶ್ರೀ ವಿಜಯ ಕವಿಯು ""ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾವಲಯ ವಿಲೀನ ವಿಶದ ವಿಷಯ ವಿಶೇಷಂ " ಎಂದು ಕನ್ನಡ ನಾಡಿನ ಅಂದಿನ ವಿಸ್ತಾರವನ್ನು ಹೇಳುತ್ತಾನೆ.

ಕದಂಬ, ಗಂಗ, ಆಳುಪ, ಚಾಲುಕ್ಯ,   ರಾಷ್ಟ್ರಕೂಟ ಹೊಯ್ಸಳ,, ವಿಜಯ ನಗರ, ಮೈಸೂರಿನ ಒಡೆಯರು.. ಹೀಗೆ ಅನೇಕ ರಾಜ ವಂಶಗಳು ಆಳಿದ ವೈಭವದ ನಾಡು ಇದು. ಪಂಪ, ರನ್ನ, ನಾಗವರ್ಮ, ಜನ್ನ, ಪೊನ್ನ, ನಾಗಚಂದ್ರ, ಬಸವಣ್ಣ, ಅಕ್ಕ ಮಹಾದೇವಿ, ಅಲ್ಲಮಪ್ರಭು, ಹರಿಹರ, ರಾಘವಾಂಕ, ಕುಮಾರ ವ್ಯಾಸ, ಕುಮಾರ ವಾಲ್ಮೀಕಿ, ಲಕ್ಷ್ಮೀಶ,ಚಾಮರಸ, ಪುರಂದರ ದಾಸ, ಕನಕ ದಾಸ, ರತ್ನಾಕರ ವರ್ಣಿ, ಸಂಚಿಯ ಹೊನ್ನಮ್ಮ, ನಂಜುಂಡ ಕವಿ,ಸರ್ವಜ್ಞ ಹೀಗೆ ಶ್ರೇಷ್ಠ ಕವಿಗಳು ಉದಯಿಸಿದ ನಾಡು ಇದು.

ಚಂಪು ಕಾವ್ಯ, ವಚನ, ರಗಳೆ, ಷಟ್ಪದಿ, ಕೀರ್ತನೆ, ಸಾಂಗತ್ಯ, ತ್ರಿಪದಿ, ಯಕ್ಷಗಾನ ಹೀಗೆ ವಿವಿಧ ರೂಪಗಳಲ್ಲಿ ಕಾವ್ಯ ರಚನೆ ಗೊಂಡಿವೆ. ಹೊಸ ಗನ್ನಡ ಕಾವ್ಯ ಸಂದರ್ಭದಲ್ಲಿ ನವೋದಯ, ಪ್ರಗತಿಶೀಲ. ನವ್ಯ, ದಲಿತ, ಬಂಡಾಯ ಹೀಗೆ ವಿವಿಧ ಸಾಹಿತ್ಯ ಪಂಥಗಳು ಕಾಣಿಸಿಕೊಂಡಿವೆ. ಕತೆ, ಕಾದಂಬರಿ, ಕವನ, ನಾಟಕ, ವಿಮರ್ಶೆ, ಪ್ರವಾಸ ಕಥನ, ಆತ್ಮ ಚರಿತ್ರೆ, ಜೀವನ ಚರಿತ್ರೆ ಇತ್ಯಾದಿ ಪ್ರಕಾರಗಳಲ್ಲಿ ಸಾಹಿತ್ಯ ಸೃಷ್ಟಿಯಾಗಿದ್ದು ಜನ ಮನ್ನಣೆ ಪಡೆದಿದೆ

ಕರ್ನಾಟಕವು ಚಿತ್ರಕಲೆ, ಶಿಲ್ಪ ಕಲೆ, ಶಾಸ್ತ್ರೀಯಹಾಗೂ ಸುಗಮ ಸಂಗೀತ, ಶಾಸ್ತ್ರೀಯ ನೃತ್ಯ, ಜಾನಪದ ಕುಣಿತ, ಯಕ್ಷಗಾನ, ಇತ್ಯಾದಿ ವಿವಿಧ ಕಲಾ ಕ್ಷೇತ್ರಗಳಲ್ಲಿ ವಿಶ್ವ ಮಾನ್ಯತೆಯನ್ನು ಪಡೆದಿದೆ. ಜಾನಪದ ಲೋಕದಲ್ಲಿ ಒಗಟು, ಗಾದೆ, ವೈದ್ಯ, ಕುಣಿತ, ಆರಾಧನೆ, ಕಾವ್ಯ ಗಳು ಅಧ್ಯಯನಗಾರರ ಗಮನ ಸೆಳೆದಿದೆ. ಲಿಖಿತ ಮಹಾ ಕಾವ್ಯ ಗಳಿಗೆ ಸರಿಸಮಾನ ವಾಗಿ ಜಾನಪದ ಮಹಾಕಾವ್ಯಗಳಾದ ಮಲೆ ಮಹಾದೇಶ್ವರ ಕಾವ್ಯ, ಮಂಟೆಸ್ವಾಮಿ ಕಾವ್ಯ, ಜುಂಜಪ್ಪನ ಕಾವ್ಯ, ಸಿರಿ ಕಾವ್ಯ.. ಹೀಗೆ ಪ್ರಬುದ್ಧ ಕಾವ್ಯ ಪರಂಪರೆ ಜಾನಪದರಿಂದ ಸೃಷ್ಟಿ ಗೊಂಡಿದೆ.

ಶ್ರೀವಿಜಯನ ಕವಿರಾಜ ಮಾರ್ಗ, ಪಂಪನ ವಿಕ್ರಮಾರ್ಜುನ ವಿಜಯ, ಆ ದಿಪುರಾಣ, ರನ್ನನ ಸಾಹಸ ಭೀಮ ವಿಜಯ, ಅಜಿತ ಪುರಾಣ, ನಾಗವರ್ಮ ನ ಕಾದಂಬರಿ, ನಾಗಚಂದ್ರ ನ ರಾಮ ಚಂದ್ರ ಚರಿತ ಪುರಾಣ, ಜನ್ನ ನ ಯಶೋದರ ಚರಿತೆ, ಅನಂತ ಪುರಾಣ, ಹರಿಹರ ನ ಗಿರಿಜ ಕಲ್ಯಾಣ,ಬಸವ ರಾಜ ದೇವರ ರಗಳೆ ಮೊದಲಾದ ನೂರಾರು ರಗಳೆ ಗಳು, ರಾಘವಾಂಕನ ಹರಿಶ್ಚಂದ್ರ ಕಾವ್ಯ, ಚಾಮರಸನ ಪ್ರಭುಲಿಂಗ ಲೀಲೆ, ಕನಕದಾಸರ ಮೋಹನ ತರಂಗಿಣಿ, ನಳ ಚರಿತ್ರೆ, ಹರಿಭಕ್ತಿ ಸಾರ, ರಾಮಧ್ಯಾನ ಚರಿತೆ, ರತ್ನಾಕರ ವರ್ಣಿಯ ಭರತೇಶ ವೈಭವ, ಸಂಚಿಯ ಹೊನ್ನಮ್ಮಳ ಹದಿಬದೆಯ ಧರ್ಮ, ನಂಜುಂಡ ಕವಿಯ ಕುಮಾರ ರಾಮ ಸಾಂಗತ್ಯ, ಕುಮಾರ ವ್ಯಾಸನ ಕರ್ನಾಟ ಭಾರತ ಕಥಾ ಮಂಜರಿ, ಕುಮಾರ ವಾಲ್ಮೀಕಿ ಯ ರಾಮಾಯಣ. ಲಕ್ಷ್ಮೀಶ ನ ಜೈಮಿನಿ ಭಾರತ, ಚಾಟು ವಿಠ್ಠಲ ನ ಭಾಗವತ, ಮುದ್ದಣ ನ ಶ್ರೀ ರಾಮಾಶ್ವಮೇದ.. ಇತ್ಯಾದಿ ಕಾವ್ಯಗಳು ಕನ್ನಡ ಕಾವ್ಯ ಪರಂಪರೆ ಯನ್ನು ಸಂಪನ್ನ ಗೊಳಿಸಿದೆ.

ಕನ್ನಡ ನಾಡಿನ ಪ್ರಾಂತ್ಯಗಳು ಭಿನ್ನ ಭಿನ್ನ ಅರಸರ ಆಡಳಿತಗಳಿಗೆ ಸೇರಿ ಕೊಂಡಿದ್ದ ಕಾರಣ  ನಾಡಿನ ಏಕೀಕರಣದ ಧ್ವನಿ ಮೊಳಗಿತು. ಬೆಳಗಾವಿ, ವಿಜಯಪುರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆ ಗಳು ಬ್ರಿಟಿಷ್ ರ ಮುಂಬಾಯಿ ಆಡಳಿತ ಕ್ಕೆ ಸೇರಿತ್ತು. ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆ ಗಳು ಬ್ರಿಟಿಷ್ ರ ಮದ್ರಾಸ್ ನ ಆಡಳಿತಕ್ಕೆ ಸೇರಿತ್ತು. ಬೀದರ್, ಗುಲ್ಬರ್ಗ, ರಾಯಚೂರು ಜಿಲ್ಲೆ ಗಳು ಹೈದರ ಬಾದ್ ನಿಜಾಮನ ಆಳ್ವಿಕೆ ಗೆ ಸೇರಿತ್ತು. ಮೈಸೂರು ಸಂಸ್ಥಾನ ಮೈಸೂರು ಒಡೆಯರ ಆಳ್ವಿಕೆ ಗೆ ಸೇರಿತ್ತು. ಕೊಡುಗು ಜಿಲ್ಲೆ, ಬ್ರಿಟಿಷ್ರು ಅಧೀನ ರಾಜ್ಯವಾಗಿತ್ತು. ಕನ್ನಡ ಸಂಸ್ಕೃತಿ ಮತ್ತು ಭಾಷೆ ಯನ್ನು ಉಳಿಸುವ ನಿಟ್ಟಿನಲ್ಲಿ ಕನ್ನಡ ಭಾಷಿಕರನ್ನು  ಒಟ್ಟುಗೂಡಿಸುವ ಪ್ರಯತ್ನಗಳು ನಡೆದವು. ಧಾರವಾಡ ದ ವಿದ್ಯಾವರ್ಧಕ ಸಂಘ, ಬೆಂಗಳೂರು ನಲ್ಲಿ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ದ ಏಕೀಕರಣ ದ ಅಗತ್ಯ ವನ್ನು ಪ್ರಚಾರ ಪಡಿಸಿದವು

1916 ರಿಂದ ತೊಡಗಿ  1956 ರ ತನಕ ವಿವಿಧ ಸಮಿತಿಗಳು ರಚನೆಗೊಂಡು ತಮ್ಮ ಅಭಿಪ್ರಾಯ ಗಳನ್ನು ಮಂಡಿಸಿದವು. ಸ್ವತಂತ್ರ ಹೋರಾಟದೊಂದಿಗೆ ಏಕೀ ಕರಣದ ಚಳುವಳಿಗಳು ತೀವ್ರ ಗೊಂಡವು.

ಆಂಧ್ರ ಪ್ರದೇಶ ರಾಜ್ಯ ದ ಕಾರಣ ಕ್ಕಾಗಿ ಆಮರಣಾಂತ  ಉಪವಾಸ ಕೈಗೊಂಡ ಪೊಟ್ಟಿ ಶ್ರೀರಾಮುಲು 1952 ರಂದು ನಿಧನರಾದರು. ಆಂಧ್ರ ಪ್ರಾಂತ ರಚನೆ ಗೆ ಕೇಂದ್ರ ಸರ್ಕಾರ ಕಾರ್ಯ ಪ್ರವತ್ತ ವಾಯಿತು. ಕನ್ನಡ ನಾಡಿನಲ್ಲಿ ಏಕೀ ಕರಣ ದ ಚಳುವಳಿ ತೀವ್ರವಾಗುತ್ತಿರುವುದನ್ನು ಗಮನಿಸಿದ   ಕೇಂದ್ರ ಸರಕಾರ ರಾಜ್ಯ ಪುನರ್ ವಿಂಗಡಣಾ ಆಯೋಗ ವನ್ನು ನೇಮಿಸಿತು.

..........ಮುಂದಿನ ಪುಟ ದಲ್ಲಿ ಮುಂದುವರಿದಿದೆ

ವಿಶೇಷ ಲೇಖನ.....

ಆಂಧ್ರ ಪ್ರದೇಶ ರಾಜ್ಯ ದ ಕಾರಣ ಕ್ಕಾಗಿ ಆಮರಣಾಂತ  ಉಪವಾಸ ಕೈಗೊಂಡ ಪೊಟ್ಟಿ ಶ್ರೀರಾಮುಲು 1952 ರಂದು ನಿಧನರಾದರು. ಆಂಧ್ರ ಪ್ರಾಂತ ರಚನೆ ಗೆ ಕೇಂದ್ರ ಸರ್ಕಾರ ಕಾರ್ಯ ಪ್ರವತ್ತ ವಾಯಿತು. ಕನ್ನಡ ನಾಡಿನಲ್ಲಿ ಏಕೀ ಕರಣ ದ ಚಳುವಳಿ ತೀವ್ರವಾಗುತ್ತಿರುವುದನ್ನು ಗಮನಿಸಿದ   ಕೇಂದ್ರ ಸರಕಾರ ರಾಜ್ಯ ಪುನರ್ ವಿಂಗಡಣಾ ಆಯೋಗ ವನ್ನು ನೇಮಿಸಿತು.

ಸುದೀರ್ಘ ಚರ್ಚೆ ಗಳು ನಡೆದು ವಿಧೇಯಕದ ಮಂಡನೆ ಯಾಗಿ ಲೋಕಸಭೆ ಮತ್ತು ರಾಜ್ಯ ಸಭೆ ಗಳು ಒಪ್ಪಿಗೆ ನೀಡಿದವು. 31.8.1956ರಂದು ರಾಷ್ಟ್ರ ಪತಿಗಳ ಅಂಗೀಕಾರ ದೊರೆಯಿತು. ಕನ್ನಡಿಗರ ರಾಜ್ಯ ದ ಹೆಸರು ಮೈಸೂರು ಎಂದಾಯಿತು.

1956 ನವೆಂಬರ್ 1ರಂದು ವಿಶಾಲ ಮೈಸೂರು ರಾಜ್ಯ ವನ್ನು ಅಂದಿನ ರಾಷ್ಟ್ರಪತಿ ಗಳಾದ ಬಾಬು ರಾಜೇಂದ್ರ ಪ್ರಸಾದ್ ಉದ್ಘಾಟಿಸಿದರು. ನೂತನ ರಾಜ್ಯದ ರಾಜ್ಯ ಪಾಲರಾಗಿ ಜಯಚಾಮರಾಜ ಒಡೆಯರ್ ಮತ್ತು ಮುಖ್ಯ ಮಂತ್ರಿಯಾಗಿ ಎಸ್. ನಿಜಲಿಂಗಪ್ಪ ಅಧಿಕಾರ ಸ್ವೀಕರಿಸಿದರು.

ದೇವರಾಜ ಅರಸು ಅವರು ಮುಖ್ಯ ಮಂತ್ರಿಗಳಾಗಿದ್ದಾಗ  1973ನವೆಂಬರ್ 1ರಂದು ಕರ್ನಾಟಕ ಎಂದು ರಾಜ್ಯಕ್ಕೆ ಪುನರ್ ನಾಮಕರಣ ಮಾಡಲಾಯಿತು.

ಬೆಂಗಳೂರು ಮತ್ತು ಹಂಪೆ ಗಳ ಲ್ಲಿ ವೈಭವ  ಸಂಭ್ರಮ ದ ಸಮಾರಂಭ ಗಳು ನಡೆದವು

ಕನ್ನಡ ಏಕೀಕರಣದ ಕಾರ್ಯದಲ್ಲಿ ತೊಡಗಿಸಿ ಕೊಂಡ ನಾಯಕರನ್ನು ನಾವಿಂದು ಸ್ಮರಿಸಿಕೊಳ್ಳ ಬೇಕಾಗಿದೆ.

ಅವರು ಕಂಡ ಕನಸುಗಳನ್ನು ನನಸು ಮಾಡುವ ಹೊಣೆಗಾರಿಕೆ ನಮ್ಮದಾಗಿದೆ.

1903 ರ ಕಾಲದಲ್ಲಿ ಶಾಂತ ಕವಿ ಗಳು ನಾಡಿನ ಕುರಿತು
ರಕ್ಷಿಸು ಕರ್ನಾಟಕ ದೇವಿ, ಸಂ

ರಕ್ಷಿಸು ಕರ್ನಾಟಕ ದೇವೀ
 ಎಂದು ಕರ್ನಾಟಕದ ವೈಭವ ವನ್ನು ಚಿತ್ರಿಸಿದರು.

ಕುವೆಂಪು ಅವರು ರಚಿಸಿದ
ಜೈ!ಭಾರತ ಜನನಿಯ ತನುಜಾತೆ

ಜಯ ಹೇ ಕರ್ನಾಟಕ ಮಾತೆ!

ನಾಡ ಗೀತೆ ಯಾಗಿ ಪ್ರೇರಣೆ ನೀಡಿತು.

ಹುಯಿಲಗೋಳ ನಾರಾಯಣ ರಾವ್ ರಚಿಸಿದ
ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು
ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು
ಎಂಬ ಹಾಡು ಕರ್ನಾಟಕದ ಇತಿಹಾಸ ಪರಂಪರೆ ಯನ್ನು ಚಿತ್ರಿಸುತ್ತದೆ.

ಕನ್ನಡ ನಾಡು ಇಂದು ಸಾಹಿತ್ಯ, ಕಲೆ, ಸಂಸ್ಕೃತಿ. ಕೈಗಾರಿಕೆ, ಕ್ರೀಡೆ, ಕೃಷಿ, ವಿಜ್ಞಾನ, ವಾಣಿಜ್ಯ, ವ್ಯವಹಾರ, ಸಾಮಾಜಿಕ, ಸಮಾನತೆ , ಶಿಕ್ಷಣ ಹೀಗೆ ಎಲ್ಲಾ ಕ್ಷೇತ್ರ ಗಳಲ್ಲೂ  ಅಭಿವೃದ್ಧಿಯನ್ನು ಹೊಂದಿ ಪ್ರಗತಿಯ ಹಾದಿಯಲ್ಲಿ ಮುನ್ನಡೆಯುತ್ತಿದೆ.

ಕನ್ನಡವನ್ನು ಕಟ್ಟುವ, ಬೆಳೆಸುವ ಕಾಯಕ ನಮ್ಮದಾಗ ಬೇಕಿದೆ. ಕನ್ನಡ ಎಂಬುದು ನಮ್ಮ ಸ್ವಾಭಿಮಾನ, ನಮ್ಮ ಸಂಸ್ಕೃತಿ, ನಮ್ಮ ಜ್ಞಾನ ಪರಂಪರೆ, ನಮ್ಮ ಇತಿಹಾಸ, ನಮ್ಮ ವರ್ತಮಾನ. ನಮ್ಮ ಭವಿಷ್ಯ.

ನಮ್ಮ ನೆಲ, ಜಲ, ಭಾಷಾ ಹೋರಾಟ ಯಶಸ್ಸನ್ನು ಕಾಣ ಬೇಕಾದರೆ ನಮ್ಮ ನಾಡಿನ ಜನ ಮನದಲ್ಲಿ ನಾಡ ಪ್ರೇಮ, ಭಾಷಾ ಪ್ರೇಮ, ಸ್ವಾಭಿಮಾನ ಮೂಡಿ ಬರಬೇಕಾಗಿದೆ.

ಈ ನಾಡು ನಮ್ಮ ಹಿರಿಯರು ನಮ್ಮ ಕಿರಿಯರಿಗೆ ಕೊಡುತ್ತಿರುವ ಬಳುವಳಿ ಎಂಬ ಭಾವ ನಮ್ಮಲ್ಲಿ ಮೂಡಿದಾಗ
ಹೊನ್ನಿನ ನಿಧಿಯಂತೆ ಪ್ರೀತಿಯಿಂದ ಸಮೃದ್ಧಿವಾಗಿ ರಕ್ಷಿಸುತ್ತಿವೆ.

ನಮ್ಮ ಮಕ್ಕಳೊಂದಿಗೆ ನಮ್ಮ ಭಾಷೆಯಲ್ಲಿ ಮಾತನಾಡೋಣ. ನಮ್ಮ ಸಂಸ್ಕೃತಿಯ ಅರಿವು ಮೂಡಿಸೋಣ. ಕನ್ನಡ ನಾಡು ನುಡಿ ಬಲಿಷ್ಠ ಗೊಳಿಸಲು ವಿವಿಧ ಹಾದಿಗಳಿವೆ.



ಕನ್ನಡ ದ ಹಾಗೂ ಕನ್ನಡ ನಾಡಿನ ಕುರಿತು ಪ್ರತಿಯೊಬ್ಬನ ಹೃದಯದಲ್ಲೂ ಅಕ್ಕರೆಯ ಭಾವ ಮೂಡಿದಾಗ ಕವಿ ಕನಸಿನ
ಚೆಲುವ ಕನ್ನಡ ನಾಡು ಉದಯವಾಗುತ್ತದೆ

ರೊ. ಕೃಷ್ಣಮೂರ್ತಿ ಪಿ,

ಸಂಪಾದಕ ಬಳಗ:  ಸಚ್ಚಿ   (9845871761), ಆನಂದ ರಾವ್ ಯಮ್. ಯೆ. (9448100455)
ಯಶೋಮತಿ (9844642696), ಶ್ರೀನಿವಾಸ್ ದೇವ ರಾವ್ (8939900770) ಮತ್ತು ಶ್ರೀಷ ಕೆ. ಭಟ್ (8861297622)